## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ:287/2025

**ಸಾಕ್ಷಿಯನ್ನು ದಿಃ 20.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಬಸವರಾಜು | ಸಿಡಬ್ಲ್ಯೂ:2 | ಪಿಡಬ್ಲ್ಯೂ:2 |
| ತಂದೆಯ ಹೆಸರು | ಮಂಚಯ್ಯ | | |
| ವಯಸ್ಸು | 38 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸಸ್ಥಳ | ಮೂಡಲಕೊಪ್ಪಲು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಜಲೇಂದ್ರ ಗೊತ್ತು, ಅವರು ಅಪಘಾತದಲ್ಲಿ ಮೃತ ಪಟ್ಟಿರುತ್ತಾರೆ. ದಿಃ 02.01.2025 ರಂದು ಪಿರಿಯಾಪಟ್ಟಣಕ್ಕೆ ಶುಂಠಿ ವ್ಯಾಪಾರದ ಹಣವನ್ನು ಪಡೆದುಕೊಳ್ಳಲು ನಾನು ಮತ್ತು ಮೃತ ಜಲೇಂದ್ರ ರವರು ಕೆಎ 45 ಯು 9521 ಸ್ಕೂಟರ್ ಅನ್ನು ಚಾಲನೆ ಮಾಡಿಕೊಂಡು ಹೋಗಿದ್ದೇವು. ಮರಳಯ್ಯನಕೊಪ್ಪಲು ಹತ್ತಿರ ಮೂತ್ರ ವಿಸರ್ಜನೆಗೆಂದು ಗಾಡಿ ನಿಲ್ಲಿಸಿ ಹೋದಾಗ ಜಲೇಂದ್ರ ಗಾಡಿ ವರಗಿಕೊಂಡು ನಿಂತಿದ್ದ, ಆಗ 12.00 ಗಂಟೆ ಆಗಿತ್ತು. ನಾನು ಏನೊ ಶಬ್ದ ಬಂದು ಅದನ್ನು ಕೇಳಿ ತಿರುಗಿ ನೋಡಿದಾಗ ಅಪಘಾತ ಆಗಿ ಮಡಿಕೇರಿ ರಸ್ತೆ ಕಡೆಯಿಂದ ಒಂದು ಅಶೋಕ್ ಲೈಲ್ಯಾಂಡ್ ಗಾಡಿ ಬಂದು ಜಲೇಂದ್ರನಿಗೆ ಅಪಘಾತ ಪಡಿಸಿ ಒಂದಷ್ಟು ದೂರು ಹೋಗಿತ್ತು. ಅಪಘಾತದಿಂದ ಜಲೇಂದ್ರ ತೀವರ್ವಾಗಿ ಗೊಂಡು ಸ್ಥಳದಲ್ಲಿ ಮೃತ ಪಟ್ಟಿದ್ದ. ನಂತರ ಚಾಸಾ 1 ರವರಿಗೆ ಪೋನ್ ಮಾಡಿ ವಿಚಾರ ತಿಳಿಸಿದೆ. ನಂತರ ಪೊಲೀಸರಿಗೆ ತಿಳಿಸಿ ಅಂಬ್ಯೂಲೆನ್ಸ್ ನವರಿಗೂ ತಿಳಿಸಿ ಅದರಲ್ಲಿ ಶವವನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು

ಹೋಗಲಾಯಿತು. ಈ ವಿಚಾರವಾಗಿ ನಾನೇ ಚಾಸಾ 1 ರವರನ್ನು ಠಾಣೆಗೆ ಕರೆದುಕೊಂಡು ಹೋಗಿ ದೂರು ಕೊಡಿಸಿರುತ್ತೇನೆ. ದೂರು ಕೊಟ್ಟ ನಂತರ ಆಸ್ಪತ್ರೆಗೆ ಹೋಗಿ ಶವವನ್ನು ತೆಗೆದುಕೊಂಡು ಹೋದೆವು.

ನಂತರ ಅಪಘಾತಕ್ಕೆ ಸ್ಥಳಕ್ಕೆ ಹೋಗಿ ಪೊಲೀಸರಿಗೆ ಜಾಗವನ್ನು ತೋರಿಸಿಕೊಟ್ಟೆ. ಆಗ ಪೊಲೀಸರು ಸ್ಥಳ ಮಹಜರ್ ಜರುಗಿಸಿದ್ದು, ಆ ಸಮಯದಲ್ಲಿ ನನ್ನ ಜೊತೆ ಚಾಸಾ 3 ಮತ್ತು 4 ರವರು ಇದ್ದರು. ಆಗ ಸಮಯ 5 ರಿಂದ 5.30 ಗಂಟೆ ವರೆಗೆ ಮಹಜರ್ ಮಾಡಿರುತ್ತಾರೆ. ಮಹಜರ್ ನಲ್ಲಿ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆ ನಿಪಿ. 2 ಎಂದು, ಸಹಿಯನ್ನು ನಿಪಿ. 2(ಎ) ಎಂದು ಗುರುತಿಸಲಾಯಿತು. ಅಲ್ಲಿಂದ ಬಿಳಿಕೆರೆ ಪೊಲೀಸ್ ಠಾಣೆಗೆ ಹೋಗಿದ್ದು, ಅಲ್ಲಿ ವಾಹನದ ಪೋಟೊ ತೆಗೆದುಕೊಂಡರು. ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಿದ್ದರಿಂದ ಅದು ಅಮಾನತ್ತು ಮಹಜರ್ ಆಗಿದ್ದು, ಅದನ್ನು ನಿಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 3(ಎ) ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ಮಾಡುವಾಗ 1 ಪೋಟೊ ತೆಗೆದಿದ್ದು, ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ. 4 ಎಂದು ಮತ್ತು ಅಮಾನತ್ತು ಮಹಜರ್ ಮಾಡುವಾಗ ಒಂದು ಪೋಟೊ ತೆಗೆದಿದ್ದು, ಅದನ್ನು ನಿಪಿ. 5 ಎಂದು ಗುರುತಿಸಲಾಯಿತು. ಈ ವಿಚಾರವಾಗಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನಾನು ಓಡಿಸುತ್ತಿದ್ದ ಸ್ಲೆಂಡರ್ ಬೈಕ್ ಅನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಬೈಕ್ ನ 4 ಪೋಟೊಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ. 6 ರಿಂದ 9 ಎಂದು ಗುರುತಿಸಲಾಯಿತು. ಅಶೋಕ ಲೈಲ್ಯಾಂಡ್ ವಾಹನದ 2 ಪೋಟೊ ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ. 10 ಮತ್ತು 11 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲು ಸಸಅ ರವರಿಂದಃ-**ಸ್ಥಳ ಮಹಜರ್ ಅನ್ನು ಮಧ್ಯಾಹ್ನ 3.00 ರಿಂದ 4.00 ಗಂಟೆ ಪೊಲೀಸರು ಜರುಗಿಸಿದ್ದರು ಎಂದರೆ ಸರಿ. ನಂತರ ಪೊಲೀಸ್ ಠಾಣೆಯಲ್ಲಿ 4.30 ರಿಂದ 5.30 ರ ವರೆಗೆ ಅಮಾನತ್ತು ಮಹಜರ್ ಮಾಡಿದ್ದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಬಿ.ಎಸ್ ವಕೀಲರಿಂದಃ**

ಆ ದಿನ ಶುಂಠಿಯನ್ನು ವಾಷಿಂಗ್ ಗೆ ಎಂದು ಪಿರಿಯಾಪಟ್ಟಣಕ್ಕೆ ತೆಗೆದುಕೊಂಡು ಹೋಗಿದ್ದೇವು. ರಾತ್ರಿ 10.00-10.30 ಗಂಟೆ ಸಮಯಕ್ಕೆ ಶುಂಠಿ ವ್ಯಾಪಾರ ಮುಗಿದಿರುತ್ತದೆ. ಅಪಘಾತ ಆಯಿತು ಎಂದು ಹೇಳಲಾದ ಮರಳಯ್ಯಕೊಪ್ಪಲು ಗೇಟ್ ಬಳಿ ಬಂದಾಗ ರಾತ್ರಿ 12.00 ಗಂಟೆ ಆಗಿತ್ತು. ಮರಳಯ್ಯನಕೊಪ್ಪಲು ಗೇಟ್ ಗಿಂತ ಮೊದಲು ಜಡಗನಕೊಪ್ಪಲು ಗೇಟ್ ಸಿಗುತ್ತದೆ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ, ಅದರೆ ಶಬ್ದ ಬಂದಾಗ ಹಿಂತಿರುಗಿ ನೋಡಿರುತ್ತೇನೆ. ಆಗ ಒಂದು ಅಶೋಕ್ ಲೈಲ್ಯಾಂಡ್ ವಾಹನ ಮುಂದು ಹೋಗುತ್ತಿತ್ತು. ವಾಹನದ ನಂಬರ್ ನನಗೆ ಕಾಣಿಸಲಿಲ್ಲ. ದೂರು ಕೊಡುವಾಗ ವಾಹನದ ನಂಬರ್ ಅನ್ನು ಕೇಳಿರಲಿಲ್ಲ. ಚಾಸಾ 1 ರವರು ದೂರು ಕೊಟ್ಟಿರುವುದನ್ನು ಓದಿ ತಿಳಿದುಕೊಂಡಿದ್ದೇನೆ. ದೂರಿನಲ್ಲಿ ವಾಹನದ ನಂಬರ್ ಹೇಳಿ ದೂರು ಬರೆಸಿರುವುದು ಸತ್ಯವಾ ಅಥವಾ ಗಾಡಿಯ ನಂಬರ್ ಹೇಳದೆ ಅನಾಮಿಕ ಎಂದು ಹೇಳಿರುವುದು ಸತ್ಯಾವಾ ಎಂದರೆ ನನಗೆ ಗೊತ್ತಿಲ್ಲ. ಸಂಚಾರಿ ನಿಯಮ ಪಾಲಿಸದೆ ನಾವೆ ಸ್ಕೂಟರ್ ನಿಂದ ಬಿದ್ದು ಸದರಿ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ನಾವು ಸುಳ್ಳು ಸಾಕ್ಷಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.